Doc-571
T-P-2

Reg No B G 155 ಶ್ರೀ ನವೆಂಬರ್ 72 16 ನೇ ರಾಜ್ಯೋತ್ಸವ ವಿಶೇಷ

In The State First Golden Jubilee Celebrated Paper 'Satyavadi' daily, Mysore 4

ಶ್ರೀ ದೇವರಾಜ ಅರಸ್ ದಕ್ಷ ನಾಯಕತದಲ್ಲಿ ಕರ್ನಾಟಕದ ಪ್ರಗತಿ

ಶ್ರೀ ಡಿ. ದೇವರಾಜ ಅರಸ್ ಅವರ ದಕ್ಷ ನಾಯಕತ್ವದ ಬಗೆಗೆ ಮೈಸೂರಿನ ಜನತೆ ಅಭಿಮಾನ ಹಾಗೂ ಹೆಮ್ಮೆ ಪಡಬೇಕು

ಕನ್ನಡ ಜನಕೋಟಿಯ ಬೇಡಿಕೆ ಆದ ರಾಜ್ಯದ ಹೆಸರು ಕರ್ನಾಟಕ ಎಂದು ಆಗಲು ಅವರು ಆಸ್ತು ಎಂದು ತಮ್ಮ ನಾಯಕತ್ವಕ್ಕೆ ಕೀರ್ತಿ ಬೆಳಗಿದರು.

ಕನ್ನಡ ನಾಡಿನ ಏಳಿಗೆಗೆ ಶ್ರಮಿಸುವುದೇ ಅವರ ಹಾಗೂ ಅವರ ಮಂತ್ರಿಮಂಡಲದ ಹೆಗ್ಗುರಿ. ಗರೀಬಿ ಹಟಾವೋ ನೀತಿಗನುಸಾರವಾಗಿ, ಧಾನ್ಯ ಸಗಟು ವ್ಯಾಪಾರದ ಪ್ರಥಮ ಹಂತವಾಗಿ, ಭತ್ತದ ಸಗಟು ವ್ಯಾಪಾರಕ್ಕೆ ಸರ್ಕಾರಕ್ಕೆ ಕೈಹಾಕಿದೆ. ಕೃಷಿ ಕ್ಷೇತ್ರದ ಪ್ರಗತಿಗಾಗಿ ನೀರಾವರಿ ಯೋಜನೆಗಳಲ್ಲಿ ಸರ್ಕಾರ ಮುಂದುವರಿಯುತ್ತಿದೆ. ಹರಿಜನರು, ಸಮಾಜದಲ್ಲಿ ಹಿಂದುಳಿದವರು ಅವರ ಸರ್ವಾಂಗೀಣ ಅಭಿವೃದ್ಧಿಗೆ ಸರ್ಕಾರ ಶ್ರಮಿಸುತ್ತಿದೆ ಸಮಾಜವಾದಿ ತತ್ವದ ಗುರಿ ಆದ ಭೂ ಸುಧಾರಣೆ ಕಾರ್ಯದಲ್ಲಿ ಸರ್ಕಾರ ಪೂರ್ಣ ಶ್ರದ್ಧೆ ವಹಿಸಿದೆ. ರಾಜ್ಯಭಾರ ಪೂರ್ಣ ಕನ್ನಡದಲ್ಲೇ ಆಗುವುದೆಂಬುದನ್ನು ನಿರೀಕ್ಷಿಸಲು ಬಹಳ ಕಾಲ ಬೇಕಿಲ್ಲ ಎನ್ನಬಹುದು.

ಶ್ರೀ ಅರಸ್ ನಾಯಕತ್ವಕ್ಕೆ ಭಗವಂತನ ಆಶೀರ್ವಾದ, ಜನತೆಯ ಬೆಂಬಲ ಯಾವತ್ತೂ ಇರಲಿ.



ರಾಜ್ಯೋತ್ಸವ ಸಂದರ್ಭದಲ್ಲಿ
ಮುಖ್ಯ ಮಂತ್ರಿ ಶ್ರೀ ದೇವರಾಜ್ ಅರಸ್
ಅವರು ನೀಡಿದ ಸಂದೇಶ

★

ಕನ್ನಡ ರಾಜ್ಯೋತ್ಸವದ ಈ ಸುದಿನದಂದು ನಾಡ ಬಾಂಧವರಿಗೆಲ್ಲಾ ನನ್ನ ಹಾರ್ದಿಕ ಶುಭಾಶಯಗಳು. ಇದೀಗ 17 ನೇ ವರ್ಷದ ಹೊಸ್ತಿಲಲ್ಲಿರುವ, ಮೈಸೂರು ರಾಜ್ಯದ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಜೀವನದಲ್ಲಿ ಪ್ರಚಲಿತ ಅವಧಿ ಒಂದು ಪರ್ವ ಕಾಲ ದಾರಿದ್ರ್ಯವನ್ನು ಹೊಡೆದೋಡಿಸುವ ಮತ್ತು ಸಮಾಜದ ಪ್ರತಿಯೊಬ್ಬ ವ್ಯಕ್ತಿಯ ಕನಿಷ್ಟ ಬೇಡಿಕೆಗಳನ್ನಾದರೂ ಈಡೇರಿಸುವ ಬಗೆಗೆ ವಿಚಾರಕ್ರಾಂತಿ ಈ ವರ್ಷದ ಆದಿಯಲ್ಲಿ ಆರಂಭವಾದ, ಅದರ ಸಾಫಲ್ಯದ ಹಿನ್ನೆಲೆಯಲ್ಲಿ ಜನತೆಯಲ್ಲಿ ಮಾಡಿದೆ ಅದಕ್ಕೆ ಅನುಗುಣವಾಗಿ ಸರ್ಕಾರ ಅನೇಕ ಪ್ರಗತಿಪರ ಯೋಜನೆಗಳನ್ನು ಕಾರ್ಯಗತಮಾಡಲು ಯತ್ನಿಸುತ್ತಿದೆ.

ಭೂಸುಧಾರಣೆ ತಿದ್ದುಪಡಿ ಶಾಸನವನ್ನು ಆಚರಣೆಗೆ ತಂದು ಭೂರಹಿತರು ಹಾಗೂ ಕೃಷಿ ಕಾರ್ಮಿಕರಿಗೆ ಸುಮಾರು ನಾಲ್ಕು ಲಕ್ಷ ಎಕರೆ ಜಮೀನು ಹಂಚಲು ಕ್ರಮ ಕೈಗೊಂಡಿದ್ದೇವೆ.

ವಾಸಕ್ಕೆ ಮನೆ ಇಲ್ಲದವರಿಗೆ, ನಿವೇಶನಗಳನ್ನು ಒದಗಿಸುವ ವ್ಯಾಪಕ ಯೋಜನೆ ಕಾರ್ಯಗತವಾಗುತ್ತಿದೆ. ಮೊದಲ ಹಂತದಲ್ಲಿ ಐದು ಲಕ್ಷ ನಿವೇಶನಗಳನ್ನೊದಗಿಸುವ ಯೋಜನೆಯ ಅಂಗವಾಗಿ ಈಗಾಗಲೇ ಎರಡು ಲಕ್ಷಕ್ಕೂ ಹೆಚ್ಚು ನಿವೇಶನಗಳನ್ನು ಹಂಚಲಾಗಿದೆ ವಸತಿ ಸಮಸ್ಯೆ ನಿವಾರಣೆಗಾಗಿ ಇಷ್ಟು ಅಗಾಧ ಪ್ರಮಾಣದಲ್ಲಿ ಯೋಜಿಸಿರುವುದು ಯತ್ನಿಸಿರುವುದು ಇದೇ ಮೊದಲು ಬಾರಿ ಎನ್ನುವುದರಲ್ಲಿ ಸಂದೇಹವಿಲ್ಲ.

ರಾಜ್ಯದಲ್ಲಿ ವಿದ್ಯುಚ್ಛಕ್ತಿ ಉತ್ಪಾದನೆಯನ್ನು ಹೆಚ್ಚಿಸಲು ಕಾಳಿನದಿ ಯೋಜನೆಯನ್ನು ಕೇಂದ್ರದ ನೆರವಿನಿಂದ ಕೈಗೊಂಡಿದ್ದೇವೆ. ಅಲ್ಲದೆ ದೇಶದಲ್ಲಿ ಕಂಡುಬಂದಿರುವ ವಿದ್ಯುತ್ ಕೊರತೆಯನ್ನು ಅದಷ್ಟು ಮಟ್ಟಿಗೆ ನಿವಾರಿಸಲು, ರಾಜ್ಯದಲ್ಲಿ ಉಳಿದ ವಿದ್ಯುತ್ ಉತ್ಪಾದನಾ ಸಾಮರ್ಥ್ಯವನ್ನು ಬಳಸಿಕೊಳ್ಳಲು ಯೋಜನೆಯೊಂದನ್ನು ಕೇಂದ್ರದ ಪರಿಶೀಲನೆಗೆ ಕಳುಹಿಸಿದ್ದೇವೆ.

ಕೈಗಾರಿಕಾ ಕ್ಷೇತ್ರದ ಪ್ರಗತಿ ತ್ವರಿತಗೊಳಿಸಲು ನಾವು ಉದ್ಯುಕ್ತರಾಗುವ ಸಮಯದಲ್ಲಿ ರಾಜ್ಯದ ಮೂರನೆ ಒಂದು ಭಾಗ ಮಳೆ ಇಲ್ಲದೆ ತೀವ್ರ ಅಭಾವ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದದ್ದು ದುರದೃಷ್ಟಕರ. ಹಿಂದೆಂದೂ ಇಲ್ಲದಷ್ಟು ಬೃಹತ್ ಪ್ರಮಾಣದಲ್ಲಿ, ಪರಿಹಾರ ಕ್ರಮಕೈಗೊಂಡಿದ್ದೇವೆ ಪರಿಸ್ಥಿತಿ ಸುಧಾರಿಸುವುದನ್ನೇಗೂ ಪರಿಹಾರ ಕಾಮಗಾರಿಗಳನ್ನೂ ಇತರ ಸೌಕರ್ಯಗಳನ್ನೂ ಮುಂದುವರಿಸಲು ಸರ್ಕಾರ ಸಿದ್ಧವಾಗಿದೆ, ಸನ್ನದ್ಧವಾಗಿದೆ ಎಂದು ಸ್ಪಷ್ಟಪಡಿಸುತ್ತೇನೆ

ಅಗತ್ಯ ಪದಾರ್ಥಗಳ ಬೆಲೆ ಏರುತ್ತಿರುವ ಈ ಸಂದರ್ಭದಲ್ಲಿ ಜನರಿಗೆ ನ್ಯಾಯವಾದ ಬೆಲೆಯಲ್ಲಿ ಆಹಾರಧಾನ್ಯ ದೊರಕಿಸುವ ಉದ್ದೇಶದಿಂದ ಭತ್ತದ ಸಗಟು ವ್ಯಾಪಾರವನ್ನು ಸರಕಾರವೇ ವಹಿಸಿಕೊಳ್ಳಲಿದೆ ಇದರಿಂದ ದುರ್ಬಲ ವರ್ಗಕ್ಕೆ ಸೇರಿದ ಸುಮಾರು ಒಂದು ಕೋಟಿ ಜನರಿಗೆ ಆಹಾರಧಾನ್ಯ ಒದಗಿಸುವ ವ್ಯವಸ್ಥೆ ಮಾಡಲಾಗಿದೆ ಬೆಲೆಗಳನ್ನು ಹತೋಟಿಯಲ್ಲಿಟ್ಟು, ಸಮಾಜದ ದುರ್ಬಲ ವರ್ಗದವರಿಗೆ ಅನುಕೂಲ ಉಂಟುಮಾಡಲು ನಾವು ಕೈಗೊಂಡಿರುವ ಕ್ರಮಗಳಿಗೆ ಜನತೆ ಹೃತ್ಪೂರ್ವಕ ಬೆಂಬಲ ನೀಡುವುದೆಂಬ ಭರವಸೆ ನನಗಿದೆ.

ರಾಜ್ಯದ ಹೆಸರು ಕರ್ನಾಟಕವಾಗುವ ಶುಭ ಸಂದರ್ಭ ಸನ್ನಿಹಿತವಾಗಿದೆ. ಇದಕ್ಕೆ ದೊರಕಿರುವ ಉತ್ಸಾಹಪೂರ್ವಕ ಸ್ವಾಗತ ಜನತೆಯ ಭಾವೈಕ್ಯ ಸಾಧನೆಯ ಸಾಕ್ಷಿ. ಅಧಿಕಾರಕ್ಕೆ ಬಂದ ಈ ಸ್ವಲ್ಪ ದಿನಗಳಲ್ಲಿ ನಮ್ಮ ಸರ್ಕಾರದ ಕಾರ್ಯಕ್ರಮಗಳಿಗೆ ಜನತೆ ನೀಡಿರುವ ಸಂಪೂರ್ಣ ಬೆಂಬಲದಿಂದಾಗಿ ಅವರ ಆಕಾಂಕ್ಷೆಗಳ ಸಾಧನೆಗಾಗಿ ಇನ್ನೂ ಹೆಚ್ಚು ಶ್ರಮಿಸುವ ಸಾಮರ್ಥ್ಯ ನಮಗೆ ಬಂದಿದೆ. ಜನತೆಯ ಆದೇಶದಂತೆ ಕೈಗೊಂಡಿರುವ ಕಾರ್ಯಕ್ರಮಗಳು ಯಶಸ್ವಿಯಾಗಿ, ಮೈಸೂರು ರಾಜ್ಯ ಸಂತುಷ್ಟ ಜನತೆಯ, ಸಂಪದ್ಭರಿತ ನಾಡಾಗಲಿ ಎಂದು ಹಾರೈಸುತ್ತೇನೆ.

ಕರ್ನಾಟಕ – ಜನಪದ

(ಡಾ. ರಂ. ಶ್ರೀ ಮುಗಳಿ)

○

ಕರ್ನಾಟಕ ಜನಪದ ಅಂದರೆ ಅಂದರೆ ಕರ್ನಾಟಕ್ಕ ಜನರು ವಾಸಿಸುವ ದೇಶ. 'ಕರ್ನಾಟಕ' ಪದವು ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿಗಳನ್ನು ಒಳಗೊಂಡ ಒಂದು ವ್ಯಾಪಕ ಮತ್ತು ಅರ್ಥಪೂರ್ಣವಾದ ಪ್ರತೀಕ ಇದೆಷ್ಟು ಪ್ರಾಚೀನ ಎಂಬುದನ್ನು ಬಲ್ಲವರಿಗೆ ಇದು ಹೊಸ ವಿಷಯವಲ್ಲ. ಕರ್ನಾಟಕ ಏಕೀಕರಣದ ಪ್ರಜ್ಞೆ ಚಿಗುರೊಡೆದು ಬೆಳೆಯುತ್ತಿದ್ದ ಕಳೆದ 50 – 60 ವರ್ಷಗಳ ಅವಧಿಯಲ್ಲಿ ಇತಿಹಾಸ ಸಂಶೋಧಕರೂ ಸಾಹಿತ್ಯಕರೂ ಅನೇಕ ಆಧಾರಗಳಿಂದ ಕರ್ನಾಟಕದ ಪ್ರಾಚೀನತೆಯನ್ನು ಎತ್ತಿ ತೋರಿಸಿದ್ದಾರೆ ಅದರ ನಿಷ್ಪತ್ತಿಯ ಕುರಿತು ಹಲವಾರು ಗಾದೆಗಳನ್ನು ಮಾಡಿದ್ದಾರೆ. ಈ ಲೇಖನದಲ್ಲಿ ಇವುಗಳಿಗೆ ಗ್ರಾಹ್ಯವೆಂದು ತೋರಿದ ಆಧಾರಗಳನ್ನು ಕೊಟ್ಟು ಬಲ್ಲವರಿಂದ ವಿಷಯವನ್ನು ಎಲ್ಲರಿಗೆ ತಿಳಿಹೇಳುವ ಉದ್ದೇಶವಿದೆ. ಈ ರಾಜ್ಯಕ್ಕೆ "ಕರ್ನಾಟಕ" ನಾಮಕರಣದ ಸುಮುಹೂರ್ತವು ಸಂನಿಹಿತವಾದ ಸಂದರ್ಭದಲ್ಲಿ ಇದಕ್ಕೆ ಪುಷ್ಟಿ ಬಂದಿದೆ. ಜನತೆಯಲ್ಲಿ ಹೊಸ ಜಿಜ್ಞಾಸೆ ಮೂಡಿದೆ, ಹೊಸ ಚೈತನ್ಯ ಚಿಮ್ಮಿದೆ. ಈ ಲೇಖನದಲ್ಲಿ ಕರ್ನಾಟಕದ ಪರ್ಯಾಯ ಪದಗಳಾದ ಕರ್ನಾಟಕ, ಕರ್ನಾಟ, ಕರ್ನ್ನಾಟ ಇವನ್ನು ಸವಿಸ್ತಾರವೆಂಬ ಭಾವಿಸಲಾಗಿದೆ.

(1) ಕರ್ನಾಟಕದ ಪ್ರಾಚೀನತೆಯು ಉಲ್ಲೇಖವು ಮಹಾಭಾರತದ ಸಭಾಪರ್ವ ಮತ್ತು ಭೀಷ್ಮಪರ್ವಗಳ ಕೆಳಗಿನ ಶ್ಲೋಕಗಳಲ್ಲಿ ಬಂದಿದೆ.

(ಅ) ಕರ್ನಾಟಕ :— ರಾಂಸ್ಯಕು
ಟ್ಟಾಶ್ಚ ಪದ್ಮಜಾಲಾಃ ಸಹೀನರಾ.
(ಸಭಾಪರ್ವ 78–98)

(ಆ) ಅಧಿಸಾರ್ ಜನಪದಾಃ ಪಕ್ಷಿ
ಣಾಃ ಭರತವರ್ಷಜ
ದ್ರವಿಡಾಃ ಕೇರಲಾಃ ಪ್ರಾಜ್ಯಾಃ ಮೂಷಿ
ಕಾಃ ವನವಾಸಿಕಾಃ
ಕರ್ನಾಟಿಕಾ ಮಹಿಷಕಾ ವಿಕಲ್ಪಾ
ಮೂಷಕಾಸ್ತಥಾ
ಯಿಲ್ಲಿಕಾಃ ಕುಂತಲಾಶ್ಚೈವ ಸೌಹೃದಾ
ನಭಕಾನನಾಃ
(ಭೀಷ್ಮಪರ್ವ 9 : 58–59)

Edited Printedand Published by Dharmapracharanirata
M S Krishna Rao (Propretor) at the Satyavadi Press
Chamarajapuram Mysore

ಸತ್ಯವಾದಿ

ಕನ್ನಡ ರಾಜ್ಯೋತ್ಸವ

1972

ನವೆಂಬರ್ ದಿನಾಂಕ ಒಂದು

ಅಂದು, ಇಂದು ಎಂದೆಂದಿಗೂ,
ನಮ್ಮೆಲ್ಲರಿಗೂ ಸುಖ ಸಂಭ್ರಮದ ದಿನ.
ಬಹು ಬೇಗನೆ ನಮ್ಮದು " ಕರ್ನಾಟಕ "
ರಾಜ್ಯವಾಗಿ, ಬಹು ದಿನದ ಕನಸು ನನಸಾಗಲಿದೆ.

ಈ ದಿನ, ದೇಶದ ಭದ್ರತೆಗಾಗಿ,
ಸುಖ ಸಮೃದ್ಧಿಗಾಗಿ,
ನಾಡಿನ ಏಳ್ಗೆಗಾಗಿ, ಮೇಲ್ಮೆಗಾಗಿ
ಬದ್ಧ ಕಂಕಣರಾಗೋಣ.

ವಿಶ್ವಾಪಕ್ಷವಾದ, ಅತಿ ತೀವ್ರವಾದ
ಅನಾವೃಷ್ಟಿಯಿಂದ ರಾಜ್ಯಕ್ಕೆ
ಬಂದೊದಗಿದ ಕಷ್ಟವನ್ನು
ನಿವಾರಿಸಲು ಸರ್ವವಿಧ
ಪ್ರಯತ್ನದಲ್ಲಿ ನಿರತರಾಗೋಣ.

ಮೈಸೂರು ರಾಜ್ಯದ ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಯಿಂದ ಪ್ರಕಟಿತ